ISSN PRINT 2319 1775 Online 2320 7876

*Research paper* © 2012 IJFANS. All Rights Reserved, UGC CARE Listed ( Group -I) Journal Volume 7, Issu 3, 2018

# ಕನ್ನಡ ಸಾಹಿತ್ಯದಲ್ಲಿನ ಆಧುನಿಕತೆಯ ಅನನ್ಯತೆಯ ಸ್ವರೂಪ

ಡಾ.ನಾಗರೆಡ್ಡಪ್ಪ ಹೆಚ್
ಕನ್ನಡ ಸಂಶೋಧಕರು

**ಸರಾಂಶ**

ಆಧುನಿಕತೆ ಮತ್ತು ಸಾಹಿತ್ಯದ ಸಂಬಂಧದ ಬಗ್ಗೆ ಈಗಾಗಲೇ ಹಲವು ಅಧ್ಯಯನಗಳು ನಡೆದಿದ್ದು, ಆಧುನಿಕತೆಯನ್ನು ಹೊರಗಿನವರ ಆಕರಮಣದ ವಿದ್ಯಮಾನ ಎಂಬಂತೆ ನೋಡಲಾಗಿದೆ. ಈ ರೀತಿಯ ವಿಶ್ಲೇಷಣೆಯಲ್ಲಿ ತೊಡಗಿದರೆ, ಪ್ರತಿಯೊಂದು ಭಾಷಿಕ ಸಮುದಾಯಗಳು ತಮ್ಮ ಸಾಹಿತ್ಯಕ ಅಭಿವ್ಯಕ್ತಿಗಳಲ್ಲಿ ಪ್ರತಿಬಿಂಬಿಸುವ ತಮ್ಮೊಳಗಿನ ಸಾಮಾಜಿಕ ಚಲನೆಗಳನ್ನು ನಿಜದ ನೆಲೆಯಲ್ಲಿ ಅರ್ಥೈಸಿಕೊಳ್ಳಲಾಗದ ಕುರುಡಿಗೆ ಒಳಗಾಗಿರುತ್ತವೆ. ಇಪ್ಪತ್ತನೆಯ ಶತಮಾನದಲ್ಲಿ ಭಾರತೀಯ ಸಮಾಜ ತನ್ನನ್ನು ಹೊಸ ವ್ಯಕ್ತಿತ್ವದಲ್ಲಿ ರೂಪಿಸಿಕೊಳ್ಳುವುದಕ್ಕೆ ಪ್ರಯತ್ನಿದ ಭಾಗವಾಗಿ 'ಆಧುನಿಕತೆ'ಯನ್ನು ವಿವರಿಸಿಕೊಳಲ್ಲು ಪ್ರಯತ್ನಿಸಿತು. ಇಲನ ಮೌಢ್ಯ, ಶೋಷಣೆ, ತಾರತಮ್ಯ, ಜ್ಞಾನದ ನಿರಾಕರಣೆ.. ಇವುಗಳಾಚೆಗೆ ಹೊಸ ವ್ಯಕ್ತಿತ್ವವನ್ನು ಕಟ್ಟಿಕೊಳ್ಳುವ ಮತ್ತು ಅದನ್ನು ಶೋಧಿಸುವ ಹೊರದಾರಿಯಾಗಿ ಆಧುನಿಕತೆಯನ್ನು ವಿವರಿಸಿಕೊಳ್ಳುವುದಕ್ಕೆ ಪ್ರಯತ್ನಿಸಲಾಯಿತು. ನಿರ್ದಿಷ್ಟ ಕಾಲ-ದೇಶಗಳಲ್ಲಿ ನಿರೂಪಣೆಗೊಂಡ ಕೃತಿಯೊಳಗೆ 'ಆಧುನಿಕತೆ' ಪರಿಕಲ್ಪನೆ ನೆಯ್ಗೆಗೊಂಡಿರುವ ಕ್ರಮವನ್ನು ಅರಿಯುವ ಪ್ರಕ್ರಿಯೆ ಅದು. ಈವರೆಗೆ ನಡೆದಿರುವ ಅಧ್ಯಯನಗಳಲ್ಲಿ ಇಂಥಾ ಸಂವಾದದಾಚೆಗೆ ಕನ್ನಡದ ಮನಸ 'ಆಧುನಿಕತೆ'ಯನ್ನು ತಾನು ಬದುಕುವ ವಿನ್ಯಾಸದ ಭಾಗವಾಗಿ ಕಟ್ಟಿಕೊಂಡಿರುವ ಮಾದರಿಗಳನ್ನು ಪರಿಶೀಲಿಸಲು ಈ ಸಂಶೋಧನೆಯಲ್ಲಿ ಪ್ರಯತ್ನಿಸಲಾಗಿದೆ. ಇಂಥ ಗುರಿಯನ್ನು ತಲುಪುವ ಸಲುವಾಗಿ ಕನ್ನಡದ ಆಯ್ದ ಕಾದಂಬರಿಗಳು, ಕತೆ ಹಾಗು ನಾಟಕ ಕೃತಿಗಳನ್ನು ಪ್ರಾತಿನಿಧಿಕವಾಗಿ ಅಭ್ಯಾಸ ಮಾಡಲಾಗಿದೆ. ಈ ಅಭ್ಯಾಸದ ಜತೆಜತೆಗೆ ಕನ್ನಡ ಸಮುದಾಯ ಕಾಲಾಂತರಗಳಲ್ಲಿ ಎದುರುಗೊಂಡ ಹೊಸತು ಮರುಕಟ್ಟಲ್ಪಟ್ಟ ಹಳತು ಚರ್ಚಿಸಲಗಿದೆ.

**ಪ್ರಮುಖ ಪದಗಳು** : ಪ್ರಗತಿಶೀಲರ ಬರೆಹಗಳಲ್ಲಿ ಆಧುನಿಕತೆ, ಯಶವಂತ ಚಿತ್ತಾಲರ ಕಥನಕ್ರಮದಲ್ಲಿ ಆಧುನಿಕತೆ, ಶಾಂತಿನಾಥ ದೇಸಾಯಿಯವರ ಕಥನಕ್ರಮದಲ್ಲಿ ಆಧುನಿಕತೆ, ಮೊಗಳ್ಳಿ ಗಣೇಶರ ದಲಿತರು ಮತ್ತು ಜಾಗತೀಕರಣ ಚರ್ಚೆ

## ಪ್ರಸ್ತಾವನೆ

ಹತ್ತೊಂಬತ್ತು ಮತ್ತು ಇಪ್ಪತ್ತನೆ ಶತಮಾನಗಳ ಕನ್ನಡ ಸಾಹಿತ್ಯದಲ್ಲಿ ಆಧುನಿಕತೆಯ ಗ್ರಹಿಕೆಯ ಪಲ್ಲಟಗಳನ್ನು ಹಿಂದಿನ ಅಧ್ಯಾಯಗಳಲ್ಲಿ ಚರ್ಚಿಸಲಾಯಿತು.

ISSN PRINT 2319 1775 Online 2320 7876

Research paper © 2012 IJFANS. All Rights Reserved, UGC CARE Listed ( Group -I) Journal Volume 7, Issu 3, 2018

ಇದೇ ಚರ್ಚೆಯನ್ನು ಇಪ್ಪತ್ತೊಂದನೇ ಶತಮಾನದಲ್ಲಿ ಪ್ರಕಟವಾದ ಸಾಹಿತ್ಯ ಕೃತಿಗಳನ್ನು ಆಧರಿಸಿ ಮಾಡಬಹುದಾದರೂ ಈ ಕಾಲದ ಸಾಹಿತ್ಯ ನಿರ್ಮಿತಿಯಲ್ಲಿ ಆ ರೀತಿಯ ಸೈದ್ಧಾಂತಿಕ ನಿರ್ದಿಷ್ಟತೆಯನ್ನು ಹುಡುಕುವುದು ಕಷ್ಟಸಾಧ್ಯ. ಇಪ್ಪತ್ತನೇ ಶತಮಾನದಲ್ಲಿ ಬೀಜರೂಪದಲ್ಲಿದ್ದ ಆಧುನಿಕ ಕೋಮುವಾದ ಮತ್ತು ನವ ವಸಾಹತುವಾದದ ಜತೆಗೆ ಬಂದ ನವ ಸಾಮ್ರಾಜ್ಯಶಾಹಿ ಶಕ್ತಿಗಳು ಹಾಗೂ ಹೊಸ ಸೂಕ್ಷ್ಮಗಳನ್ನು ಒಳಗೊಂಡು ಪ್ರಯೋಗಿಸಲ್ಪಡುತ್ತಿರುವ ಜಾತಿವಾದಗಳಿಗೆ ಸಮಕಾಲೀನ ಸಾಹಿತ್ಯ ನಿರ್ಮಿತಿ ಮುಖಾಮುಖಿಯಾಗಬೇಕಿರುವುದರಿಂದ ಈ ಸಾಹಿತ್ಯ ಚಟುವಟಿಕೆಯ‍‍ ‘ಆಧುನಿಕತೆ’ಯ ಪಲ್ಲಟಗಳನ್ನು ಗ್ರಹಿಸುವುದು ಅಷ್ಟು ಸುಲಭದ ಕೆಲಸವಲ್ಲ.

ಡಿ.ಆರ್.ನಾಗರಾಜ್‌ರಂತಹ ಸಾಹಿತಿಗಳ ತಲೆಮಾರಿನ ನಂತರ ಕನ್ನಡದಲ್ಲಿ ಆ ರೀತಿಯ ಆಲೋಚನಾ ವಿಧಾನವನ್ನು ಮುಂದುವರಿಸಬಲ್ಲವರು ಬಂದಿದ್ದು ವಿರಳವೆನ್ನಬಹುದು. ವಿದ್ವಾಂಸರಾದ ಕೆ.ವಿ.ನಾರಾಯಣ ಅಂಥವರು ಕನ್ನಡ ಜಗತ್ತು ಆಲೋಚಿಸಬಹುದಾದ ಹತ್ತಾರು ವರ್ಷಗಳಷ್ಟು ಮುಂದಿನ ಕಾಣ್ಕೆಗಳನ್ನು ತಮ್ಮ ಬರೆಹ ಹಾಗೂ ಉಪನ್ಯಾಸಗಳ ಮೂಲಕ ಮಂಡಿಸುತ್ತಿರುವರಾದರೂ, ಕನ್ನಡದ ಮುನ್ನೋಟವನ್ನರಿಯಬಲ್ಲ ಕಣ್ಣು-ಮನಸ್ಸುಗಳಿಗೆ ಅದನ್ನು ಗ್ರಹಿಸಲು ಸಿದ್ಧತೆ ಸಾಲುತ್ತಿಲ್ಲ. ಈ ಮಾತು ವಿಮರ್ಶೆಗೆ ಮಾತ್ರ ಸೀಮಿತವಲ್ಲ; ಸಾಹಿತ್ಯ ವಿಮರ್ಶೆಯೆಂಬುದು ಆ ಕಾಲದ ಸಾಹಿತ್ಯ ನಿರ್ಮಿತಿಯ ಪ್ರತಿಬಿಂಬವಾಗಿರುತ್ತದೆ ಎಂದು ನಂಬಿದರೆ ಇದು ಅರ್ಥವಾಗುತ್ತದೆ.

ನವ್ಯದ ‘ವ್ಯಕ್ತಿ ವಿಶಿಷ್ಟ ಸಿದ್ಧಾಂತ’ದ (ಇಂಡುವಿಜುವಲಿಸ್ಟಿಕ್) ಸಾಹಿತ್ಯ ಲಕ್ಷಣವು ದಲಿತ- ಬಂಡಾಯ ಸಾಹಿತ್ಯ ಚಟುವಟಿಕೆಯಿಂದ ಕೊಂಚ ಮಗ್ಗುಲು ಬದಲಿಸಿತು. ನವೋದಯದ ‘ಮುದಾಯ ಪ್ರಜ್ಞೆ’ಯನ್ನೆ ಆಧರಿದ ದಲಿತ ಸಾಹಿತ್ಯವು ಅಲಯವರೆಗೆ ವ್ಯಕ್ತಿವಾದವನ್ನು ಆತ್ಯಂತಿಕವಾಗಿ ಅನುಸರಿಸುತ್ತಿದ್ದ ಕನ್ನಡ ಸೃಜನಶೀಲ ಸಾಹಿತ್ಯ ನಿರ್ಮಿತಿಗೆ ಸವಾಲಾಗಿ ಪರಿಣಮಿಸಿತು. ಕಲೆಯನ್ನು ಮನೋರಂಜನೆಯಾಗಿ ಪರಿಭಾವಿಸುತ್ತಿದ್ದ ಜನವರ್ಗಗಳಿಗೆ ಪ್ರಗತಿಶೀಲ ಸಾಹಿತಿಗಳು ಕಣ್ಣು ತೆರೆಸಿದರು. ಆ ನಂತರದಲ್ಲಿ ಬಂದ ನವ್ಯರು ಪಾಶ್ಚಾತ್ಯ ಜ್ಞಾನಶಿಸ್ತುಗಳ ಜತೆಗೆ ನಡೆಸಿದ ಅನುಸಂಧಾನ ಪೂರ್ಣಗೊಳ್ಳುವುದರ ಒಳಗೇ ದಲಿತ- ಬಂಡಾಯ ಹುಟ್ಟಿತು. ಈ ಧಾರೆ ಮತ್ತೆ ಪ್ರಗತಿಶೀಲರ ಆಲೋಚನೆಗಳಿಗೆ ಮರುಜೀವ ನೀಡಿತು. ಅಂದರೆ, ದುಡಿಯುವ ಜನ ಸಮುದಾಯಗಳ ನಡುವೆ ನಿಂತು ಅವರ ದನಿಯಾಗಲು ಪ್ರಯತ್ನಿಸಿತು. ಪ್ರಗತಿಶೀಲರು ದುಡಿಯುವ ಸಮುದಾಯದ ಬಗ್ಗೆ ಸಾಹಿತ್ಯ ಸೃಷ್ಟಿಸಿದರೆ, ದಲಿತ ಸಾಹಿತ್ಯ ದುಡಿಯುವ ಸಮುದಾಯಗಳದ್ದೇ ಧ್ವನಿಯಾಗಿತ್ತು.

ISSN PRINT 2319 1775 Online 2320 7876

*Research paper* **© 2012 IJFANS. All Rights Reserved, UGC CARE Listed ( Group -I) Journal Volume 7, Issu 3, 2018**

ಈ ಬದಲಾವಣೆಯನ್ನು ಓರಿಯಂಟಲಿಸ್ಟರ ಕಣ್ಣಿನಲ್ಲಿ ವಿವರಿಸಿಕೊಂಡ ಕನ್ನಡ ವಿಮರ್ಶಕರು ಸರಿಯಾಗಿ ಗ್ರಹಿಸಿಲ್ಲಿಲ. ಈ ಕಾರಣದಿಂದ 'ನವ್ಯೋತ್ತರ' ಸಾಹಿತ್ಯದ ಪರಿಕರಗಸಲ ದಲಿತ ಸಾಹಿತ್ಯವನ್ನು ಅರ್ಥ ಮಾಡಿಕೊಳ್ಳಲು ಯತ್ನಿಸಿ ಎಡವಿದರು. ಈ ಕಾರ್ಯವನ್ನು ಸಮರ್ಪಕ ರೀತಿಯಲ್ಲಿ ಮುನ್ನಡೆಸಬೇಕಿದ್ದ ಡಿ.ಆರ್.ನಾಗರಾಜ್ ಅವರು ಅರ್ಧ ದಾರಿಗೇ ಕಾಣೆಯಾದ್ದರಿಂದ ದ್ವಂದ್ವ ಮುಂದುವರಿಯಿತು ಮತ್ತು ಕನ್ನಡ ಸಾಹಿತ್ಯ ಚರಿತ್ರೆಯ ನಿರ್ಮಾಣ ಕಾರ್ಯದಲ್ಲಿ ದಲಿತ ಸಾಹಿತ್ಯ ಜಾತಿ ಆಧಾರದಲ್ಲಿ ಗುರುತಿಸಲ್ಪಟ್ಟರೆ, ಬಂಡಾಯ ಸಾಹಿತ್ಯ ಪದಶಃ ಅರ್ಥದ ಮರೆಯಲ್ಲಿ ಸ್ಥಬ್ದಗೊಂಡಿತು.

ದಲಿತ ಸಂಘರ್ಷ ಸಮಿತಿಯ ಹುಟ್ಟು ಮತ್ತು ಬಿ. ಬಸವ◌ಂಗಪ್ಪನವರ ಬೂಸಾ ಹೇಳಿಕೆಗಳ ಹಿನ್ನೆಲೆಯಲ್ಲಿ ಕಾರ್ಯಪ್ರವೃತ್ತವಾದ ದಲಿತ ಚಿಂತಕರ ತಂಡದಲ್ಲಿ ದಲಿತೇತರ ಸಾಹಿತಿಗಳು ಇದ್ದುದು ಕರ್ನಾಟಕದ ಸಾಹಿತ್ಯ ಮತ್ತು ಸಂಸ್ಕೃತಿಯ ಇತಿಹಾಸದಲ್ಲಿ ದಾಖಲಾರ್ಹ ಸಂಗತಿ. ಈ ಅಂಶ ಕೂಡಾ ದಲಿತ ಸಾಹಿತ್ಯ ಕಮ್ಯುನಿಷ್ಟ ನೋಟಕ್ರಮವನ್ನು ಆಧಾರವಾಗಿಟ್ಟುಕೊಂಡು ಬೆಳೆದದ್ದಕ್ಕೆ ಕಾರಣವಾಗಿರಬಹುದು. ಈ ನೋಟಕ್ರಮದ ಕಾರಣದಿಂದ ಜಾತಿ ಅಸಮಾನತೆಯ ಕಾರಣಕ್ಕೆ ಕುಗ್ಗಿಹೋಗಿದ್ದ ದಲಿತ ಸಮುದಾಯ ವರ್ಗಪ ರಜ್ಞೆಯ ಆಧಾರದಲ್ಲಿ ರೂಪಿಸಿದ ಹೋರಾಟಗಳಲ್ಲಿ ಅನಿವಾರ್ಯವಾಗಿ ಪಾಲ್ಗೊಳ್ಳಬೇಕಾಯಿತು. ಮತ್ತು ಇದೇ ಮಾದರಿಯಲ್ಲಿ 'ಸಿದ್ದಲಿಂಗಯ್ಯ ನವರು ಹೊಲೆ ಮಾದಿಗರ ಹಾಡು' ಸೃಷ್ಟಿಯಾಯಿತು. ಭಾರತೀಯ ಸಮಾಜವನ್ನು ವರ್ಗ ಸಂಘರ್ಷದ ಹಿನ್ನೆಲೆಯಲ್ಲಿ ನೋಡುವ ತರಬೇತಿಗೆ ಪಕ್ಕದ ಆಂದ್ರ ಮತ್ತು ದೂರದ ಮಹಾರಾಷ್ಟ್ರದ ದಲಿತ ಹೋರಾಟಗಳೂ ಕಾಣಿಕೆ ನೀಡಿದವು.

ಕನ್ನಡದಲ್ಲಿ ದಲಿತ ಹೋರಾಟ ಮುನ್ನಲೆಗೆ ಬಂದ ಸಮಯದಲ್ಲಿ ಭಾರತದ ತಳ ಸಮುದಾಯಗಳು ಬಾಬಾಸಾಹೇಬ್ ಅಂಬೇಡ್ಕರರು ರೂಪಿಸಿದ ತಾತ್ವಿಕತೆ ಕಡೆಗೆ ಕಣ್ಣುನೆಟ್ಟು ಕೂತಿದ್ದರೂ ಕನ್ನಡದ ದಲಿತ ಹೋರಾಟಕ್ಕೆ ಅಂಬೇಡ್ಕರ್ ದಕ್ಕಿದ್ದು ಬಹಳ ತಡವಾಗಿಯೇ. ಆದರೆ, ಬಾಬಾಸಾಹೇಬರ ಸಂವಿಧಾನದ ಅರಿವು ಕರ್ನಾಟಕದ ದಲಿತ ಹೋರಾಟಕ್ಕೆ ಬಲ ತುಂಬಿದ್ದು ಸುಳ್ಳಲ್ಲ. ಈ ಸಂದ¨ದಲ್ಲಿ ಅಂದರೆ, ೧೯೮೦ರ ಆಚೆಗೆ ಕರ್ನಾಟಕದಲ್ಲಿ ನಡೆದ ದಲಿತ ಹೋರಾಟಗಳನ್ನು ಅಧ್ಯಯನ ಮಾಡಿದರೆ, ವರ್ಗ ಸಂಘರ್ಷದ ಸೈದ್ಧಾಂತಿಕ ನಂಬಿಕೆ ಸ್ಪಷ್ಟವಾಗಿ ಗೋಚರಿಸುತ್ತದೆ. ಆಗ ಹುಟ್ಟಿದ 'ಬಂಡಾಯ ಸಾಹಿತ್ಯ ಸಂಘಟನೆ ದಲಿತರಲ್ಲದ ಹಿಂದುಳಿದ ಸಮುದಾಯಗಳ ಸಾಹಿತಿಗಳು ಕೂಡಿ ಕಟ್ಟಿದರೂ ದಲಿತ ಸಾಹಿತಿಗಳನ್ನು ಜೊತೆಗೆ ಕರೆದೊಯ್ದರು. ಈ ಸಮಯಕ್ಕಾಗಲೇ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ 'ದಲಿತ ಸಾಹಿತ್ಯ' ಎಂಬ ವಿಂಗಡಣೆ ಶುರುವಾಗಿಬಿಟ್ಟಿತ್ತು. ಸಿದ್ದಲಿಂಗಯ್ಯ ಮತ್ತು ದೇವನೂರ ಮಹಾದೇವ ಅವರ ಕೃತಿಗಳು ಇಡೀ ಕನ್ನಡ ಸಮಾಜವನ್ನು ಹುಬ್ಬೇರಿಸುವಂತೆ ಮಾಡಿದ್ದವು. ಈ ವಿದ್ಯಮಾನಗಳು ಒಟ್ಟಾರೆ ಕನ್ನಡ

Research paper © 2012 IJFANS. All Rights Reserved, UGC CARE Listed ( Group -I) Journal Volume 7, Issu 3, 2018

ಸಾಹಿತ್ಯದ ಮೇಲೆ ಹೆಚ್ಚು ಪರಿಣಾಮ ಬೀರಿದವು. ಬಂಡಾಯ ಸಾಹಿತ್ಯ ಸಂಘಟನೆಯ ಭಾಗವಾಗಿದ್ದ ಡಿ.ಆರ್.ನಾಗರಾಜ್ ಅವರ ಬರೆಹಗಳು ಕನ್ನಡದ ಓದನ್ನು ನಿರ್ದೇಶಿಸತೊಡಗಿದವು.

ಬಂಡಾಯ ಸಾಹಿತಿಗಳು ಪ್ರಗತಿಶೀಲರನ್ನು ಅನುಕರಿಸುವಂತೆ ಬರೆಯತೊಡಗಿದರು. ಬರಗೂರು ರಾಮಚಂದ್ರಪ್ಪ ಮತ್ತು ಚಂದ್ರಶೇಖರ ಪಾಟೀಲ ಅವರಂತಹ ಸಾಹಿತಿಗಳು ಬರೆದ ಕೃತಿಗಳು ಪ್ರಗತಿಶೀಲರ ಆಶಯಗಳನ್ನು ಮುಂದುವರಿಸಿದವು. ಬಸವರಾಜ ಕಟ್ಟೀಮನಿ, ನಿರಂಜನ ಮತ್ತು ಚದುರಂಗ ರೀತಿಯ ಲೇಖಕರ ಆಶಯದಂತೆ ಉಳ್ಳವರ ವಿರುದ್ಧದ ಪ್ರತಿಭಟನಾತ್ಮಕ ಸಾಹಿತ್ಯ ಸೃಷ್ಟಿಗೆ ಈ ಅನುಕರಣೆ ಕಾರಣವಾಯಿತು. ದಲಿತ ಸಾಹಿತ್ಯದಲ್ಲಿ ಕೋಟಿಗಾನಹಳ್ಳಿ ರಾಮಯ್ಯ, ಮ.ನ.ಜವರಯ್ಯ, ಕೆ.ಬಿ.ಸಿದ್ದಯ್ಯ, ಎಲ್.ಹನುಮಂತಯ್ಯ ಮೊದಲಾದವರು ವಿಶಿಷ್ಟ ಭಾಷೆ ಮತ್ತು ಶೈಲಿಯಲ್ಲಿ ಬರೆಯಲು ತೊಡಗಿದರು. ದಲಿತ ಸಂಘರ್ಷ ಸಮಿತಿಯಲ್ಲಿ ತೊಡಗಿಕೊಂಡಿದ್ದ ದಲಿತ ಸಾಹಿತಿಗಳು 'ನೊಂದ ನೋವಿನ ಆಧಾರದ ಮೇಲೆ ಬಂಡಾಯ ಸಾಹಿತಿಗಳ ನಡುವೆ ಅಂತರ ಕಾಯ್ದುಕೊಂಡರು. ಅಂದರೆ, ದಲಿತ ಸಾಹಿತ್ಯ ಮತ್ತು ಬಂಡಾಯ ಸಾಹಿತ್ಯ ಒಂದೇ ಅಲ್ಲ ಎಂಬ ಗೆರೆಯನ್ನು ಹಾಕಿಕೊಂಡರು. ದೇವನೂರ ಮಹಾದೇವರ ಕುಸುಮಬಾಲೆ ಪ್ರಕಟವಾದ ನಂತರ 'ದಲಿತ ಸಾಹಿತ್ಯ' ತನ್ನ ಅರ್ಥವನ್ನು ವಿಸ್ತರಿಸಿಕೊಂಡಿತು. ಆದರೆ, ಇದರ ಮುಂದುವರಿಕೆಯಾಗಿ ಬರೆಯಬೇಕಿದ್ದ ದಲಿತ ಸಾಹಿತಿಗಳು ಪ್ರವರ್ಧಮಾನಕ್ಕೆ ಬರಲೇ ಇಲ್ಲ. ಕಾವ್ಯದಲ್ಲಿ ಸ್ವಲ್ಪಮಟ್ಟಿನ ಹೊಸತನ ಕಂಡರೂ ಗದ್ಯ ಬರೆಹ ಕುಸುಮಬಾಲೆಗೆ ನಿಂತುಬಿಟ್ಟಿತು. ಆ ನಂತರದಲ್ಲಿ ಅಲ್ಲಲ್ಲಿ ಕತೆಗಳನ್ನು ಬರೆದ ತರುಣ ತಲೆಮಾರು ಹಿರಿಯ ತಲೆಮಾರಿನ ಪ್ರಭಾವದಿಂದ ಬಿಡಿಸಿಕೊಳ್ಳಲು ಸಾಧ್ಯವಾಗಲಿಲ್ಲ; ಅಥವಾ ಅವರು ಅರ್ಧಕ್ಕೇ ನಿಲ್ಲಿಸಿದ್ದ 'ದಲಿತ ತಾತ್ವಿಕತೆ'ಯನ್ನು ಕಟ್ಟುವ ಕೆಲಸ ಮುಂದಕ್ಕೆ ಹೋಗಲ ಇಲ್ಲ. ಈ ಕಾರಣದಿಂದಾಗಿ ಆನಂತರದಲ್ಲಿ ಬಂದ ದಲಿತ ಸಮುದಾಯದೊಳಗಿನ ಕತೆಗಳು ಕಲಾತ್ಮಕ ಅಭಿವ್ಯಕ್ತಿಯಾಗಿರದೆ, ಕಪ್ಪು- ಬಿಳುಪು, ಶೋಷಕ- ಶೋಷಿತರ ಮಟ್ಟದ ಅನುಭವಜನ್ಯವಾದ ಅಥವಾ ವಾಸ್ತವವಾದಿ ದಾಖಲಾತಿಗಳಾಗಿ ಉಳಿದುಬಿಟ್ಟವು.

ಬರವಣಿಗೆಯಲ್ಲಿ ಮೂಡಿಸಲು. ಬದುಕಿನಿಂದ ದೊರೆತದ್ದನ್ನು ಬಳಸಿಕೊಳುವುದು ಲಾಗತಿಯಿಂದ ನಡೆದುಬಂದಿದೆ. ಆದರೆ, ಬದುಕು ಒದಗಿಸುವುದನ್ನು, ಬರೆಯುವವರು ಪಡೆದುಕೊಳ್ಳುವುದು ನಾವು ತಿಳಿದಷ್ಟು ಒಮ್ಮೆಯಲ್ಲಿರುವುದಿಲ್ಲ. ಪಡೆದದ್ದನ್ನು ಬರೆಹದಲ್ಲಿ ಮೂಡಿಸುವುದೂ ಕೂಡ ಇನ್ನೂ ಗೋಜುಗಳನ್ನು ಹೊಂದಿದೆ. ಯಾಕೆ

ISSN PRINT 2319 1775 Online 2320 7876
Research paper © 2012 IJFANS. All Rights Reserved, UGC CARE Listed ( Group -I) Journal Volume 7, Issu 3, 2018

‘ಬಂಡಾಯ- ದಲಿತ’ ಬರೆಹಗಾರರಲ್ಲಿ ತವಕ ಮೇಲುಗೈ ಪಡೆದಿದೆಯೆಂದರೆ, ಅವರು ಮಂಡಿಸುವ ಬದುಕು, ಅದು ಒದಗಿಸಿದ ಸರಕು, ಅದರ ಬಿಸುಪು, ಬಿಸಿಯುಸಿರು ಇವೆಲ್ಲವೂ ಅವನ್ನು ಅವರು ಪಡೆಯುವ ವೇಳೆಗೆ ಚೌಕಟ್ಟುಗಳಿಗೆ ಸಿಲುಕಿ ಗೊತ್ತಾದ ಚಹರೆಗಳನ್ನಷ್ಟೇ ಉಳಿಸಿಕೊಳ್ಳುವುದೇ ಆಗಿದೆ. ಈ ಚೌಕಟ್ಟುಗಳನ್ನು ಒದಗಿಸಿದವರು ಹೊರಗೆ ನಿಂತ ಇತರರು ಎಂಬುದನ್ನು ಮರೆಯಬಾರದು.(ಕೆ.ವಿ.ನಾರಾಯಣ,) ಕೆವಿಎನ್ ಹೇಳುತ್ತಿರುವ ಹಾಗೆ ಅನುಭವವನ್ನು ಹಾಗೆ ಇದ್ದಹಾಗೇ ಮಂಡಿಸಲಾಗದು. ಅನುಭವವನ್ನು ಸೃಜನಾತ್ಮಕ ಕಟ್ಟುವಿಕೆಗೆ ಒಗ್ಗಿಸಬೇಕಾದರೆ, ಅದಕ್ಕೆ ಒಂದು ರೀತಿಯ ಧ್ಯಾನದ ಅಗತ್ಯವಿರುತ್ತದೆ. ತನ್ನ ಎದೆಯಲ್ಲಿರುವ ನೋವನ್ನು ತಾನೇ ಬದುಕಬೇಕಿರುವ ಸಾಮಾಜಿಕ ವಾಸ್ತವಕ್ಕೆ ಮುಖಾಮುಖಿ ಮಾಡುವಾಗ ಅದಕ್ಕೆ ಅಗತ್ಯವಿರುವ ಸಹಿಷ್ಣು ಪ್ರಜ್ಞೆಯನ್ನು ಲೇಪಿಸಬೇಕಾಗುತ್ತದೆ. ದೇವನೂರು, ಸಿದ್ದಲಿಂಗಯ್ಯನವರ ನಂತರ ಬಂದ ಅಂಚಿನ ಸಮುದಾಯಗಳ ಲೇಖಕರಿಗೆ ಇದು ಸಾಧ್ಯವಾಗಲ್ಲಿಲ ಈ ಕಾರಣಕ್ಕಾಗಿ ‘ನವ್ಯೋತ್ತರ ಸಾಹಿತ್ಯ ಚಟುವಟಿಕೆಗಳಲ್ಲೂ ಹೊಸ ಕಾಲದ ಆಶಯಗಳನ್ನೊತ್ತು ನಿಲ್ಲಲು ಆಗಲಿಲ್ಲ.

**ಪ್ರಗತಿಶೀಲರ ಬರೆಹಗಳಲ್ಲಿ ಆಧುನಿಕತೆ**

ಕನ್ನಡ ಸಾಹಿತ್ಯದಲ್ಲಿ ಪ್ರಗತಿಶೀಲರು ಬರದೇ ಹೋಗಿದ್ದರೆ, ಇಲ್ಲಿನ ಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆ ಒಂದು ಸೈದ್ಧಾಂತಿಕ ತಿಳಿವಾಗಿ ಇರುತ್ತಿರಲಿಲ್ಲ. ಕುವೆಂಪುರಂತಹ ಬರೆಹಗಾರರಲ್ಲಿ ಈ ಪ್ರಜ್ಞೆ ಸ್ಥಾಯಿಯಾಗಿ ಇತ್ತಾದರೂ ಓದುಗರು ಇದನ್ನು ಈ ಕಣ್ಣೋಟದಿಂದ ನೋಡುತ್ತಿದ್ದರೆನ್ನುವ ನಂಬಿಕೆಯಿಲ್ಲ. ಅದು ಬರೆಹಕ್ಕೇ ಇರಬೇಕಾದ ಲಕ್ಷಣ ಎಂದುಕೊಂಡು ಸುಮ್ಮನಾಗಿಬಿಡುತ್ತಿದ್ದರು. ಹಾಗೆಂದು ಪ್ರಗತಿಶೀಲರಿಂದ ಕನ್ನಡ ಸಾಹಿತ್ಯ ಸೈದ್ಧಾಂತಿಕವಾಗಿ ಶ್ರೇಷ್ಟಗೊಂಡುಬಿಟ್ಟಿತು ಎಂದೂ ಹೇಳಲಾಗುವುದಿಲ್ಲ. ಪ್ರಗತಿಶೀಲ ಪಂಥದ ಹೆಸರಲ್ಲಿ ಗುರುತಿಸಿದ ಬಹಳಷ್ಟು ಲೇಖಕರಿಗೆ ಆ ಪಂಥದ ತಿಳಿವಳಿಕೆಯೇ ಇರಲಿಲ್ಲ ಎನ್ನುವುದೂ ಸತ್ಯವೇ. ನವೋದಯ ಸಾಹಿತ್ಯ ಉತ್ತುಂಗದಲ್ಲಿ ಇದ್ದ ಕಾಲದಲ್ಲಿ ಮಾರ್ಕ್ಸ್ವಾದದ ಪ್ರಭಾವದಿಂದ ಹುಟ್ಟಿಕೊಂಡ ಈ ಪ್ರಗತಿಶೀಲ ಪಂಥ ತಾನು ಕಟ್ಟಿಕೊಂಡ ಗೋಡೆಯ ಕಾರಣಕ್ಕೇ ದೇಶದಲ್ಲಿ ಅತಿ ಬೇಗನೇ ಅವಸಾನವಾದರೂ ಕನ್ನಡದ ಬರೆಹಗಾರರು ಮತ್ತು ಓದುಗರಲ್ಲಿ ಸಮಾಜದ ಬಗ್ಗೆ ಯೋಚಿಸುವ ಹೊಸ ದಾರಿಯನ್ನು ಕಂಡುಕೊಳ್ಳಲು ಸಹಕಾರಿಯಾಯಿತು. ಇವರ ಆಗಮನದಿಂದಾಗಿ ನವೋದಯದ ಬಹಳಷ್ಟು ಬರೆಹಗಾರರು ತಮ್ಮ ಬರೆಹದ ಶೈಲಿಯನ್ನು ಬದಲಿಸಿಕೊಂಡರು; ಸಾಹಿತ್ಯ ಕಟ್ಟೋಣದ ವಸ್ತುಗಳ ಆಯ್ಕೆಯ ವಿಷಯದಲ್ಲಿ ಎಚ್ಚರದಿಂದ ನಡೆದುಕೊಂಡರು. ಹಾಗೂ ಮುಂದಿನ ನವ್ಯರ ಹುಟ್ಟಿಗೆ ಇರಬೇಕಾದ ಒಂದು ಸೈದ್ಧಾಂತಿಕ ಬದ್ಧತೆಗೂ ಇದು ಕಾರಣವಾಯಿತು.

ISSN PRINT 2319 1775 Online 2320 7876
Research paper © 2012 IJFANS. All Rights Reserved, UGC CARE Listed ( Group -I) Journal Volume 7, Issu 3, 2018

ಇಂದು ನಮ್ಮ ದೇಶ ಅದರ ಇತಿಹಾಸದ ಅತ್ಯಂತ ಮಹತ್ವದ ದುರಂತಕ್ಕೆ ಒಸಗಾಗಿದೆ. ಒಂದೆಡೆಯಿಂದ ಮಾನವೀಯವೂ, ಅಸಮರ್ಥವೂ ಆದ ಪರಕೀಯ ಸಾಮ್ರಾಜ್ಯಶಾಹಿ ಅಧಿಕಾರ ಬಿಟ್ಟುಕೊಡಲು ನಿರಾಕರಿಸುತ್ತಿದೆ. ಇನ್ನೊಂದೆಡೆಯಿಂದ ರಾಕ್ಷಸೀಯ ಜಪಾನೀ ಫ್ಯಾಸಿಸಂ ನಮ್ಮ ಪೂರ್ವಕ್ಕೆ ಕೈ ಚಾಚುತ್ತಿದೆ. ..........ಭಾರತದ ಪ್ರಗತಿಶೀಲ ಬರೆಹಗಾರರಾದ ನಾವು ಇಂದು ನಮ್ಮ ಹಾಗೂ ಜಗತ್ತಿನ ಸಕಲ ಜನತೆಯ ಸಾಮ್ರಾಜ್ಯಶಾಹಿ ಮತ್ತು ಫಾಸಿಸಂಗಳ ವಿರುದ್ಧವಾದ ಹೋರಾಟದ ಬೆಂಬ¯ಗರಾಗಿ ನಿಲತ್ತೇವೆ.(ಡಾ.ಬಸವರಾಜ ಕಲ್ಗುಡಿ,) ಇದು ೧೯೪೩ರಲ್ಲಿ ಮುಂಬೈಯಲ್ಲಿ ನಡೆದ ಪ್ರಗತಿಶೀಲ ಬರೆಹಗಾರರ ಸಮೇಳನದಲ್ಲಿ ತೆಗೆದುಕೊಂಡ ನಿರ್ಣಯ. ಭಾರತದ ಮಟ್ಟಿಗೆ ಇದನ್ನು ಬಿಟ್ಟರೆ ಮತ್ಯಾವ ಬರೆಹಗಾರರೂ ತಮ್ಮ ಬರವಣಿಗೆಯನ್ನು ಕುರಿತು ಇಂತಹ ನಿರ್ಣಯಗಳನ್ನು ತೆಗೆದುಕೊಂಡಿಲ್ಲ. ಇದೇ ಪ್ರಗತಿಶೀಲ ಬರೆಹಗಾರರ ಕರ್ನಾಟಕ ರಾಜ್ಯಮಟ್ಟದ ಸಮ್ಮೇಳನ ೧೯೪೩ರ ಡಿಸೆಂಬರಿನಲ್ಲಿ ಶಿವಮೊಗ್ಗದಲ್ಲಿ ನಡೆಯಿತು. ನಮ್ಮ ಕಲೆಯೂ ಸಾಹಿತ್ಯವೂ ಒಳ್ಳೆಯ ಬದುಕಿಗಾಗಿ ಜನತೆ ನಡೆಸುವ ಹೋರಾಟದೊಡನೆ ಸಂಬಂಧಿತವಾಗಿವೆ. ಅಸಹಾಯತೆಯ, ನಿರಾಸೆಯ ಸಾಹಿತ್ಯ ಪ್ರಗತಿಪಂಥೀಯರಿಗೆ ಸದಾ ಪರಕೀಯ. ಇಂಥ ಪ್ರವೃತ್ತಿಗಳು ಮಾನವನ ಕರ್ತೃತ್ವ ಶಕ್ತಿಯನ್ನು ಹ್ರಾಸಗೊಳಿಸುತ್ತವೆ; ಉತ್ತಮ ಜೀವನದ ಬಗೆಗಿನ ಅವನ ಕನಸುಗಳನ್ನು ಮಣ್ಣುಗೂಡಿಸುತ್ತವೆ. ಆ ಕನಸುಗಳು ಮೂರ್ತರೂಪ ತಳೆಯುವಂತೆ ತಮ್ಮ ಕತೆಗಳ ಮೂಲಕ ನೆರವಾಗುವುದೇ ಪ್ರಗತಿಪಂಥೀಯರ ಕರ್ತವ್ಯ. (ಡಾ.ಬಸವರಾಜ ಕಲ್ಗುಡಿ,) ಈ ನಿರ್ಣಯ ಪ್ರಗತಿಶೀಲ ಪಂಥ ಪ್ರಾರಂಭವಾದ ಕಾರಣವನ್ನು ತಿಳಿಸುತ್ತದೆ. ಮುಂಬೈಯಲ್ಲಿ ನಡೆದ ಸಮಾವೇಶದಲ್ಲಿ ಕರ್ನಾಟಕದ ಪ್ರತಿನಿಧಿಗಳಾಗಿ ಭಾಗವಹಿಸಿದ್ದ ಶ್ರೀರಂಗರು ಮತ್ತು ನಿರಂಜನರದ್ದು ಕನ್ನಡದಲ್ಲಿ ಮರೆಯಲಾರದ ಹೆಸರುಗಳು. ಕರ್ನಾಟಕದಲ್ಲಿ ನಡೆದ ಸಮಾವೇಶದ ಅಧ್ಯಕ್ಷತೆಯನ್ನು ವಹಿಸಿದ್ದ ಅನಕೃ ಇನ್ನೂರಕ್ಕೂ ಹೆಚ್ಚು ಕಾದಂಬರಿಗಳನ್ನು ಬರೆದವರು. ಇವರೊಂದಿಗೆ ಮುಂದೆ ತರಾಸು ಕೂಡಿಕೊಂಡರು. ಆದರೆ ಪ್ರಗತಿಶೀಲ ಪಂಥದ ಮೇಲಿನ ನಿರ್ಣಯವನ್ನು ಶಿರಸಾವಹಿಸಿ ಪಾಲಿಸಿದವರು ನಿರಂಜನರು ಮಾತ್ರ. ಅವರ ಕಮ್ಯುನಿಷ್ಟ ಪಕ್ಷದ ಸದಸ್ಯತ್ವ ಮತ್ತು ಬರೆಹದ ಮೇಲೆ ವಿಧಿಸಿದ ಕಟ್ಟುನಿಟ್ಟು ಆ ಕೇವಲ ಎರಡೇ ವರ್ಷಗಳಲ್ಲಿ ಪ್ರಗತಿಶೀಲರಲ್ಲಿ ಒಡಕು ಮೂಡಿಸಿತು.

ಸಾಹಿತ್ಯ ಸೃಷ್ಟಿಗೆ ಕಟ್ಟಳೆಗಳಿರಬಾರದು ಎಂದು ಒಪ್ಪಿದರೂ, ಒಂದು ಸಮಾಜದ ಆಗು ಹೋಗುಗಳನ್ನು ಲೇಖಕರಾದವರು ಗಮನಿಸಬೇಕು ಮತ್ತು ಸಾಮಾಜಿಕ ಜವಾಬ್ದಾರಿಯನ್ನು ತಮ್ಮ ಬರೆಹದಲ್ಲಿ ಕಾಣಿಸಬೇಕು ಎನ್ನುವ ನಿಲುವು ಒಳ್ಳೆಯದ್ದೇ. ಈ ನಿಲುವು ತರಾಸು ಮತ್ತು ಅನಕೃ ಅಂಥವರಿಗೆ ಹಿಡಿಸಲಿಲ್ಲ, ಅವರ ಕಾದಂಬರಿಗಳಲ್ಲಿ


IJFANS International Journal of Food And Nutritional Sciences Official Publication of International Association of Food and Nutrition Scientists

ISSN PRINT 2319 1775 Online 2320 7876
Research paper © 2012 IJFANS. All Rights Reserved, UGC CARE Listed ( Group -I) Journal Volume 7, Issu 3, 2018

ಭಾರತದ ತಾರತಮ್ಯದಿಂದ ಕೂಡಿದ ಸಾಮಾಜಿಕ ವಾಸ್ತವದ ಯಥೇಚ್ಛ ವಿವರಗಳಿದ್ದವು. ಹೆಣ್ಣಿನ ಬಗ್ಗೆ, ತಳ ಸಮುದಾಯಗಳ ಬಗ್ಗೆ ಎದೆಯೆತ್ತಿ ಮಾತಾಡಬೇಕಾದ ಧೈರ್ಯವನ್ನು ಅವರು ಪ್ರದರ್ಶಿಸಲಿಲ್ಲ. ಬಸವರಾಜ ಕಟ್ಟೀಮನಿ ಮತ್ತು ಚದುರಂಗರು ಸ್ವಲ್ಪಮಟ್ಟಿಗೆ ನಿರಂಜನರ ಜೊತೆಗೆ ನಿಂತದ್ದು ಬಿಟ್ಟರೆ ಕರ್ನಾಟಕದಲ್ಲಿ ಪ್ರಾರಂಭವಾದ ಎರಡೇ ವರ್ಷಗಳಲ್ಲಿ ಅದು ಸ್ತಬ್ಧಗೊಂಡಿತು.

ಹೇಗೆ ನವೋದಯದ ಎಲ್ಲ ಸಾಹಿತಿಗಳಲ್ಲೂ ಇದನ್ನು ನಿರೀಕ್ಷಿಸಲು ಆಗುವುದಿಲ್ಲವೋ, ಹಾಗೇ ಪ್ರಗತಿಶೀಲ ಸಾಹಿತಿಗಳಲ್ಲೂ ಇದನ್ನು ನಿರೀಕ್ಷಿಸಲು ಆಗುವುದಿಲ್ಲ. ನಿರಂಜನ ಅಂಥವರು ಕಮ್ಯುನಿಷ್ಟ ಚಳವಳಿಯ ಬಗ್ಗೆ ಇನ್ನಿಲ್ಲದಂತೆ ಸಮರ್ಥನೆಗೆ ನಿಂತರೂ ಕೊನೆಕೊನೆಗೆ ಭ್ರಮನಿರಸನಗೊಂಡರು ಆದರೆ, ಸಿದ್ಧಾಂತ ಬಿಡಲಿಲ್ಲ, ಆದರೆ, ಕೆಲವು ಪ್ರಗತಿಶೀಲ ಲೇಖಕರು ಪ್ರಗತಿಶೀಲತೆಗೆ ಬದ್ಧವಾಗಿರುವ ಘೋಷಣೆಗಳನ್ನು ಮಾಡಿದ್ದರೂ ಅದರ ವಿರುದ್ಧ ನಡೆದುಕೊಂಡಿದ್ದು ಸುಳ್ಳಲ್ಲ. ಈ ಪ್ರಗತಿಶೀಲ ಪ್ರಜ್ಞೆಯ ಆಧುನಿಕ ವಿಚಾರವಂತಿಕೆ ಇಪ್ಪತ್ತೆದು- ಮೂವತ್ತು ವರ್ಷಗಳ ನಂತರ ಬಂಡಾಯ ಲೇಖಕರಲ್ಲಿ ಕಾಣಿಸಿಕೊಂಡಿತು. ಪ್ರಗತಿಶೀಲರ ಕತೆ- ಕಾದಂಬರಿಗಳಲ್ಲಿ ಕಾಣುವ ಶ್ರಮಿಕರು, ವೇಶ್ಯೆಯರು ಮುಂತಾದ ತಳ ಸಮುದಾಯಗಳ ಪಾತ್ರಗಳು ಕಾಲಾಂತರದಲ್ಲಿ ಕನ್ನಡ ಸಾಹಿತ್ಯದಲ್ಲಿ ನಿಂತುಬಿಟ್ಟವು. ನವ್ಯರು ಈ ಪಾತ್ರಗಳನ್ನು ನಿರ್ವಹಿಸಿದ ಕ್ರಮಕ್ಕೂ ಪ್ರಗತಿಶೀಲರು ಮತ್ತು ಬಂಡಾಯ ಸಾಹಿತಿಗಳು ಈ ಪಾತ್ರಗಳನ್ನು ನಿರ್ವಹಿಸಿದ ಕ್ರಮಕ್ಕೂ ವ್ಯತ್ಯಾಸವಿದೆ. ಆನಂತರ ಅವು ದಲಿತ ಸಾಹಿತ್ಯದಲ್ಲಿ ಭಿನ್ನ ರೂಪದಲ್ಲಿ ನಿರ್ವಹಿಸಲ್ಪಡುತ್ತವೆ.

**ಯಶವಂತ ಚಿತ್ತಾಲರ ಕಥನಕ್ರಮದಲ್ಲಿ ಆಧುನಿಕತೆ**

ನವ್ಯದ ಅನಂತಮೂರ್ತಿ, ಲಂಕೇಶ್ ಮತ್ತು ಪೂರ್ಣಚಂದ್ರ ತೇಜಸ್ವಿಯವರ ಬರೆಹಗಳ ಬಗ್ಗೆ ಮಾತನಾಡುವಾಗಲೇ ನವ್ಯರಲ್ಲಿ ಇವರಷ್ಟೇ ಪ್ರಮುಖರೆನಿಸಿಕೊಂಡ ಯಶವಂತ ಚಿತ್ತಾಲರು ಮತ್ತು ಶಾಂತಿನಾಥ ದೇಸಾಯಿ ಅವರ ಬರೆಹಗಳ ಬಗ್ಗೆ ಮಾತನಾಡದೆ ಇರಲಾಗದು. ಅದರಲ್ಲೂ ಕನ್ನಡ ಸಾಹಿತ್ಯ ಮತ್ತು ಆಧುನಿಕತೆಯ ವಿಷಯ ಬಂದಾಗ ಈ ಇಬ್ಬರನ್ನೂ ಬಿಟ್ಟು ಮುಂದೆ ಹೋಗಲು ಸಾಧ್ಯವಿಲ್ಲ. ಯಶವಂತ ಚಿತ್ತಾಲರು ನವ್ಯರ ಸಮಕಾಲೀನ ಲೇಖಕರಾದರೂ, ನವ್ಯದ ಪರಿಧಿಯಾಚೆಗೆ ಬರೆಯಲು ಯತ್ನಿಸುತ್ತಿದ್ದರು. ವಿಜ್ಞಾನದ ವಿದ್ಯಾರ್ಥಿಯಾಗಿದ್ದ ಅವರು, ಕೆಮಿಕಲ್ ಇಂಜಿನಿಯರಿಂಗ್ ಓದಿ ಬದುಕನ್ನು ವೈಜ್ಞಾನಿಕ ಮನೋಭಾವದಿಂದ ಗ್ರಹಿಸಲು ಕಲಿತವರು. ಮುಂಬಯಿಯಲ್ಲಿ ಬದುಕಬೇಕಾದ ಅನಿವಾರ್ಯತೆ ಬಂದಿದ್ದರಿಂದ ಕನ್ನಡ ಲೇಖಕರಿಗಿಂತ ಭಿನ್ನ ಅನುಭವಗಳನ್ನು ಪಡೆದವರು. ತಮ್ಮ ಲಖಕ ಜೀವನದ ಬಷಿಕಾ ವನ್ನು

ISSN PRINT 2319 1775 Online 2320 7876

*Research paper* **© 2012 IJFANS. All Rights Reserved,** **UGC CARE Listed ( Group -I) Journal Volume 7, Issu 3, 2018**

ಮುಂಬಯಿ ಮಹಾನಗರದಲ್ಲಿ ಕಳೆದ ಮತ್ತು ಅಲ್ಲಿನ ಔದ್ಯಮಿಕ ಜೀವನದ ಮೂಲಚೂಲಗಳನ್ನು ಬಲ್ಲ ಚಿತ್ತಾಲರಿಗೆ, ನಾವು ಇಂದು ಅನುಭವಿಸುತ್ತಿರುವ ಜಾಗತೀಕರಣ, ನಗರೀಕರಣ, ಅನಾಥಪ್ರಜೆ ಮುಂತಾದವುಗಳ ನೇರ ಅನುಭವಗಳು ನಲವತ್ತು ವರ್ಷಗಳ ಹಿಂದೆಯೇ ತಿಳಿದಿದ್ದವು. ಆದ್ದರಿಂದ ಅವರ ಅಂದಿನ ವರ್ತಮಾನವು ನಮ್ಮ ಇಂದಿನ ವರ್ತಮಾನವಾಗಿ ನಮ್ಮೊಳಗೆ ಇಳಿಯುತ್ತದೆ. ಈ ವಾಸ್ತವವನ್ನು ಮುಂಬಯಿ, ಕುಮಟಾ ಮತ್ತು ಹನೇಹಳ್ಳಿಗಳನ್ನು ಏಕಕಾಲದಲ್ಲಿ ವಿದ್ವಸ್ತಗೊಳಿಸಿರುವ ಸಾತತ್ಯವಾಗಿ ಗ್ರಹಿಸಿದ ಚಿತ್ತಾಲರು, ಆ ಮೂರೂ ಕಡೆಗಳನ್ನು ಏಕತ್ರಗೊಳಿಸುತ್ತಾರೆ. ತಮ್ಮ ಕಾದಂಬರಿಗಳಲ್ಲಿ ಮತ್ತು ಅದಕ್ಕಿಂತ ಮುಖ್ಯವಾಗಿ ಅ◌ರ್ಲ ಬರುವ ಪಾತ್ರಗಳ ಹೃದಯದಲ್ಲಿ.( ಡಾ.ಎಚ್.ಎಸ್.ರಾಘವೇಂದ್ರ ರಾವ್,)

ಹತ್ತು ಕಥಾಸಂಕಲನಗಳು ಮತ್ತು ಆರು ಕಾದಂಬರಿಗಳನ್ನು ಬರೆದ ಚಿತ್ತಾಲರು ಕನ್ನಡದ ಸಾಹಿತ್ಯಕ ಪ್ರೇರಣೆಗಳಿಂದಲ್ಲದೆ, ದಾಸ್ತೋವಸ್ಕಿ, ಕಾಫ್ಕಾ, ಮಾರ್ಕ್ವೆಜ್, ಮಿಲನ್ ಕುಂದೇರಾ ರೀತಿಯ ಬರೆಹಗಾರರಿಂದ ಪ್ರಭಾವಿತರಾದವರು. ಈ ಕಾರಣಕ್ಕಾಗಿ ತಮ್ಮ ಕಥನಗಳಲ್ಲಿ ವಿಶ್ವಸ್ಥ ಮಾದರಿಯ ಮಾಂತ್ರಿಕತೆಯನ್ನು ತುಂಬಲು ಸದಾ ಪ್ರಯತ್ನಿಸುತ್ತಿದ್ದರು. ಮತ್ತು ತಮ್ಮ ಬರವಣಿಗೆಯನ್ನು ಜಗತ್ತಿನ ಹುಡುಕಾಟದ ಸಾನವನ್ನಾಗಿ ಮಾಡಿಕೊಂಡರು. ಮನುಷ್ಯರ ಇನ್ನೊಬ್ಬರನ್ನು ಆಳುವ ಪ್ರವೃತ್ತಿಯ ನಡುವೆಯೂ ಪ್ರೀತಿ ಮುಕ್ಕಾಗದೇ ಜೀವಂತವಾಗಿರಬೇಕು ಎಂದು ಬಯಸಿದ ಚಿತ್ತಾಲರು ತಮ್ಮ ಹುಡುಕಾಟದಲ್ಲಿ ಕಂಡುಕೊಂಡಿದ್ದು ಮನುಷ್ಯರನ್ನು ಮತ್ಯಾವುದೋ ಹೊರಗಿನ ಶಕ್ತಿ ಹಾಳುಮಾಡುವುದಿಲ್ಲ; ಬದಲಾಗಿ ಮನುಷ್ಯರೊಳಗಿನ ಕೃತ್ರಿಮತೆಯೇ ಅವರನ್ನು ನಾಶ ಮಾಡುತ್ತದೆ ಎಂಬುದು. ಇದರ ಭಾಗವಾಗಿ ಆಧುನಿಕ ಕಾರ್ಪೊರೇಟ್ ಜಗತ್ತೂ ಇರುವುದರಿಂದ ಮನುಷ್ಯರ ಸುಪ್ತ ಕ್ರೌರ್ಯ ಆ ಆಧುನಿಕ ಶಕ್ತಿಯನ್ನು ತನ್ನದೇ ನಾಶಕ್ಕೆ ಬಳಸಿಕೊಳ್ಳುತ್ತದೆ ಎಂಬ ಸತ್ಯವನ್ನು ಅರಿತರು.

ಚಿತ್ತಾರ ಅನನ್ಯತೆಯೆಂದರೆ, 'ಈವಿಲ' ಎನ್ನುವುದಕ್ಕೆ ಸಮರ್ಪಕವಾದ ಪದವೇ ಇಲ್ಲದ ಸಂಪ್ರದಾಯವೊಂದರಲ್ಲಿ ಮನುಷ್ಯ ಸ್ವಭಾವದಲ್ಲಿರುವ ಕೆಡುಕಿನ ಅಂಶಗಳನ್ನು ತಮ್ಮ ಪ್ರಧಾನ ವಸ್ತುವಾಗಿ ಬಳಸಿಕೊಂಡಿದ್ದು. ಅವರ ಕಥಾಪ್ರಪಂಚದಲ್ಲಿ ಪ್ರೀತಿ ಮತ್ತು ಸಹಬಾಳ್ವೆಗಳನ್ನು ನಾಶಮಾಡುವ ಶಕ್ತಿಗಳು ಕೇವಲ ಸಮಾಜದ ರಚನೆಗಳಲ್ಲಿಲ್ಲ. ಅಂಥ ಆದಿಮ ಪ್ರವೃತ್ತಿಗಳು ಮನುಷ್ಯರ ಸುಪ್ತಪ್ರಜ್ಞೆಯಲ್ಲಿವೆ. ಹೀಗಾಗಿ ಮನುಷ್ಯರು ಕಟ್ಟಿರುವ ನಾಗರಿಕ ಪ್ರಪಂಚ ಹಾಗೂ ಈ ಪ್ರಪಂಚದಲ್ಲಿ ಅವರ ಸಂಭಾವಿತ ನಡವಳಿಕೆಗಳು ಕೇವಲ ಮುಖವಾಡಗಳು ಮಾತ್ರ. ಅತ್ಯಂತ ನಾಜೂಕಿನ ಸಂಭಾವಿತ ಕಾರ್ಪೊರೇಟ್ ಜಗತ್ತು ಕೂಡ ಒಂದು ಮುಖವಾಡ. ಅದರ ನೈಜ ಮುಖವೆಂದರೆ, ಆಕ್ರಮಣ, ಕ್ರೌರ್ಯ

ISSN PRINT 2319 1775 Online 2320 7876
Research paper © 2012 IJFANS. All Rights Reserved, UGC CARE Listed ( Group -I) Journal Volume 7, Issu 3, 2018

ಹಾಗೂ ಸ್ವಾರ್ಥ. ಇದು ಅಕ್ಷರಶಃ ಒಂದು ಆದಿಮ ಪ್ರಪಂಚ. ಮನುಷ್ಯರ ಅಸ್ತಿತ್ವದ ಈ ಮುಖವನ್ನು ಇಷ್ಟು ತೀವ್ರವಾಗಿ ಶೋಧಿಸಿದ ಲೇಖಕರು ಕನ್ನಡದ ಕಡಿಮೆ.( ರಾಜೇಂದ್ರ ಚೆನ್ನಿ,)

ಒಟ್ಟರೆಯಾಗಿ ಚಿತ್ತಾರು ಕನದ 'ಬದುಕಿನ ಮೌಲ್ಯದ ಪಿಡುಕಾಟವಾಗಿ ನಾವು ಅವರ ಕಥನಕ್ರಮವನ್ನು ಓದಬೇಕು. ಹಾಗೆ ಓದಿದಾಗ ಅವರು ಕಂಡರಿಸುತ್ತಿರುವ ಪಾತ್ರ ಲಕ್ಷಣಗಳು ಯಾವುದೇ ಸಾಮಾಜಿಕ ವ್ಯವಸ್ಥೆ ಆಧುನಿಕಗೊಳ್ಳುವಾಗ ಇಂಥಾ ಸ್ಥಿತಿಯನ್ನು ಅನುಭವಿಸಬೇಕಾಗುತ್ತದೆ ಎಂಬುದು ನಮ್ಮ ಅರಿವಿಗೆ ಬರುತ್ತದೆ. ನಮಗೆ ´ಮಕಾ¯ನವಾಗಿರುವ ಆಧುನಿಕತೆಯ ಸವಾಲುಗಳನ್ನು ಸಾಹಿತ್ಯಕವಾಗಿ ವಿವರಿಸಲು, ವಿಶ್ಲೇಷಿಸಲು, ಅದರ ಬಿಕ್ಕಟ್ಟುಗಳನ್ನು ಕಂಡುಕೊಳ್ಳಲು ಹಾಗೂ ಕನಿಷ್ಟಪಕ್ಷ ವ್ಯಕ್ತಿಯ ನೆಲೆಯಲ್ಲಿ ಸಾಧ್ಯವಿರುವ ಪರಿಹಾರಗಳನ್ನು ಕಂಡುಕೊಳ್ಳಲು ಕಥೆ- ಕಾದಂಬರಿಗಳನ್ನೇ ಬಳಸಿದ ಕನ್ನಡ ಲೇಖಕರಲ್ಲಿ ಚಿತ್ತಾಲರು ಮುಖ್ಯರು. ಹಾಗೆಂದು ಅವರು ಕಟ್ಟಿದ ಕೃತಿಗಳು ಕೇವಲ ಸಮಕಾಲಿಕ ಮಾತ್ರವಲ್ಲ; ಅನಂತಮೂರ್ತಿಯವರು ರೂಪಿಸಿದ ಪರಿಭಾಷೆಯಲ್ಲಿ ಹೇಳುವುದಾದರೆ, ಅವರ ಕಾದಂಬರಿಗ ´´ಸಾದ್ಯ' ಮತ್ತು 'ವತ'ಗಸೆರಡೂ ಒಂದೇ. ಚಿತ್ತಾರು ಎದುರಿದ ಆಧುನಿಕತೆಯು ಕುವೆಂಪು ಮತ್ತು ಕಾರಂತರು ಮಾಡಿದ ಅನುಸಂಧಾನ ಮಾಡಿದ ಆಧುನಿಕತೆಗಿಂತ ಭಿನ್ನವಾದುದು ಮತ್ತು ಹೆಚ್ಚು ಅಮೂರ್ತವಾದುದು. ಷಿಗೆ ನೋಡಿದರೆ ಚಿತ್ತಾರು 'ಶಿಕಾರಿ' ರೀತಿಯ ಕಾದಂಬರಿ ಬರೆದ ಸಂದರ್ಭದಲ್ಲಿ ಆಧುನಿಕತೆಯ ವಿರಾಠ್ ಸ್ವರೂಪ ಇನ್ನೂ ಶೈಶವಾವಸ್ಥೆಯಲ್ಲಿತ್ತು. ಅವರು ತಮ್ಮ ಸಾಹಿತ್ಯಕ ಕಾಣ್ಕೆಯ ಮೂಲಕ ತಮ್ಮ ಭವಿಷ್ಯತ್ತಿನ ದಿನಗಳ ಕ್ರೌರ್ಯವನ್ನು ಕಟ್ಟಿಕೊಟ್ಟಿದ್ದರು. ತೇಜಸ್ವಿ ಮತ್ತು ಲಂಕೇಶರು ಹಳ್ಳಿಗಳಿಗೆ ಹಿಂದಿರುಗಿ ಅಲ್ಲಿನ ಮನುಷ್ಯ ಸ್ವಭಾವವನ್ನು ಅಭ್ಯಸಿಸುವ ಹೊತ್ತಿಗೆ ಚಿತ್ತಾಲರು ಮುಂಬೈಯಲ್ಲಿದ್ದರು. ಈ ಅನಿವಾರ್ಯತೆ ಅವರಿಗೆ ಬದುಕಿನ ವಿಸ್ತಾರತೆಯನ್ನು ಅರ್ಥಮಾಡಿಸಿತು.

## ಶಾಂತಿನಾಥ ದೇಸಾಯಿಯವರ ಕಥನಕ್ರಮದಲ್ಲಿ ಆಧುನಿಕತೆ

ನವ್ಯ ಸಾಹಿತಿಗಳ ಸಾಲಿನಲ್ಲಿ ಯಶವಂತ ಚಿತ್ತಾಲರು ಹೇಗೋ ಹಾಗೇ ಶಾಂತಿನಾಥ ದೇಸಾಯಿಯವರ ಹೆಸರೂ ಪ್ರಮುಖವಾದುದು. ಪ್ರಗತಿಶೀಲರ ನಂತರ ಸಾಮಾಜಿಕ ವಾಸ್ತವವನ್ನು ಆಧರಿಸಿ ಕಥನಗಳನ್ನು ನಿರೂಪಿಸಿದ ದೇಸಾಯಿಯವರು ನವ್ಯರ ಆಶಯಗಳನ್ನು ವಿಸ್ತರಿಸಿದರು. ನವ್ಯದ ಇತರ ಲಖಕರಿಗಿಂತ ಕೊಂಚ ಭಿನ್ನವಾಗಿ 'ಆಧುನಿಕತೆ'ಯನ್ನು ಎದುರುಗೊಂಡವರು. ನವ್ಯರ ವ್ಯಕ್ತಿವಾದದ ಶುರುವಾತು ದೇಯಿಯವರ 'ಮುಕ್ತಿ' ಕಾದಂಬರಿಯಿಂದಲ ಎಂಬುದನ್ನು ವಿದ್ವಾಂಸರು ಗುರುತಿತ್ತಾರೆ.

ISSN PRINT 2319 1775 Online 2320 7876
*Research paper* **© 2012 IJFANS. All Rights Reserved,** **UGC CARE Listed ( Group -I) Journal Volume 7, Issu 3, 2018**

ಅಲಯವರೆಗೆ ‘'ಸಾಂಪ್ರದಾಯ ಮತ್ತು ಆಧುನಿಕತೆ' ಎಂಬ ಅವಸಿ ವೈರುಧ್ಯದ ನಡುವಿನ ವಾಗ್ವಾದದ ತೊಡಗಿದ್ದ ನವ್ಯರು 'ಮುಕ್ತಿ' ಕಾದಂಬರಿಯಿಂದಾಚೆಗೆ ನವ್ಯದ ದಾರಿಗೆ ಹೊರಳಿದರು. 'ಮುಕ್ತಿ'ಯ ಗೌರೀಶ್ ಕಾದಂಬರಿಯೊಳಗೆ ತನ್ನದೇ ಭಾವ ಪ್ರಪಂಚವನ್ನು ಸೃಷ್ಟಿಸಿಕೊಂಡರೂ 'ಮುಕ್ತಿ' ಕಾಣುವುದು ಷಿರಗಿನ ಮಾರ್ಗದಿಂದ. ಮನುಶಿಯರ ಬದುಕಿನಲ್ಲಿ ಸ್ನೇಹ, ಪ್ರೇಮ ಮತ್ತು ಲೈಂಗಿಕತೆಗಳು ಸಾವಿನೊಂದಿಗೆ ಯಾಕೆ ಮಿಳಿತಗೊಂಡಿರುತ್ತವೆ ಎಂಬುದನ್ನು ಗೌರೀಶ ಶೋಧಿಸುತ್ತಾನೆ.

ದೇಸಾಯಿಯವರ ಮುಕ್ತಿಯಂತೆಯೇ, 'ಬೀಜ', 'ಓಂಣಮೋ' ಮತ್ತು 'ವಿಕ್ಷೇಪ' ಕಾದಂಬರಿಗಳು ಈ ನಿಟ್ಟಿನಲ್ಲಿ ಆಧುನಿಕತೆಯ ಕಾರಣಕ್ಕೆ ಮನುಷ್ಯರ ಬದುಕಿನಲ್ಲಿ ಹುಟ್ಟುವ ಪರಕೀಯತೆ, ಅಸಂಗತತೆಯನ್ನು ಮಂಡಿಸುತ್ತವೆ. ಕ್ಷಿತಿಜದಂಥ ವೈಯಕ್ತಿಕ ಅನುಭವವನ್ನು ಬೇರೆ ಮಟ್ಟಗಳಿಗೆ ವಿಸ್ತರಿಸುತ್ತಾರೆ. ಮಿಸ್ ಭಾಟಿಯಾಳ ಅನುಭವ ಎರಡು ಜೀವನಶೈಲಿಗಳ ಮಧ್ಯದ, ಎರಡು ಸಂಸ್ಕಾರಗಳ ಮಧ್ಯದ ಸಂಘರ್ಷಕ್ಕೆ ಪ್ರತೀಕವಾಗುವಷ್ಟು ಗಟ್ಟಿಯಾಗಿದೆ. 'ಮುಕ್ತಿ' ಕಾದಂಬರಿಗೆ ಇಂಥ ಮುಂದಿನ ಕಾದಂಬರಿ 'ವಿಕ್ಷೇಪ'ವೂ ಕೂಡ ಸೀಮಿತವಾದ ವರ್ತುಲದಲ್ಲಿಯೇ ತನ್ನ ಪ್ರಯೋಗಶೀಲ ನಿರೂಪಣೆಯಿಂದಾಗಿ ಮಾತ್ರ ಗಮನ ಸೆಳೆಯುತ್ತದೆ. .( ರಾಜೇಂದ್ರ ಚೆನ್ನಿ,)

### ಮೊಗಳ್ಳಿ ಗಣೇಶರ ದಲಿತರು ಮತ್ತು ಜಾಗತೀಕರಣ ಚರ್ಚೆ

ಮೊಗಳ್ಳಿ ಗಣೇಶರ ಕತೆಗಳಲ್ಲಿ ಸ್ವಲ್ಪಮಟ್ಟದ ಹೊಸತನ ಕಂಡಿತು. ಖಚಿತವಾಗಿ ದಲಿತ ಲೋಕ ಮಂಡಿಸಬೇಕಿದ್ದ ಕಥನ ಕ್ರಮದ ಹಾದಿಯಲ್ಲಿ ಅವರ ಕತೆಗಳು ಮುನ್ನಲೆಗೆ ಬಂದಿದ್ದವು. ಆದರೆ, ಅವರು ಆತ್ಯಂತಿಕವಾಗಿ ಆಧರಿಸಿದ 'ಮಾಂತ್ರಿಕ ವಾಸ್ತವತವಾದ ಕಲ್ಪನೆ ಈ ನಂಬಿಕೆಯನ್ನು ಹುಸಿಗೊಳಿಸಿತು. ಪಾರಂಪರಿಕ ಸಾಂಸ್ಕೃತಿಕ ನಂಬಿಕೆಗಳನ್ನು ಪ್ರಶ್ನಿಸುವ ನಿಟ್ಟಿನಲ್ಲಿ ಹಳೆಯ ಮಾದರಿಯನ್ನೇ ಮೊಗಳ್ಳಿಯವರೂ ಬಳಸಲು ಶುರುಮಾಡಿದ್ದರಿಂದ ದೇವನೂರರ ಕತೆಗಳು ಕಾಣಿಸಿದ ಅನನ್ಯತೆಯ ಸ್ವರೂಪ ಇಲ್ಲಿ ಕಾಣದೇ ಹೋಯಿತು. ಆದರೆ, ಖಂಡಿತವಾಗಿ ಮೊಗಳ್ಳಿಯವರ ಕತೆಗಳು ಇಪ್ಪತ್ತನೇ ಶತಮಾನದ ಉತ್ತರಕಾಲೀನ ಕನ್ನಡ ಸಾಹಿತ್ಯದ ಪ್ರಜ್ಞೆಯನ್ನು ವಿಸ್ತರಿಸಿದವು ಇದೇ ಸಂಧರ್ಭದಲ ಮೊಗಳ್ಳಿ ಗಣೇಶರು ಸೃಷ್ಟಿಸಿದ ದಲಿತರು ಮತ್ತು ಜಾಗತೀಕರಣ' ವಾಗ್ವಾದ ಕನ್ನಡ ಭಾಷಿಕ ಕುಲದಲ್ಲಿ ಹೊಸ ಚರ್ಚಾಸಾಧ್ಯತೆಗಳನ್ನು ಹುಟ್ಟಿಹಾಕಿತು. ಅಲ್ಲಿಯವರೆಗೆ ಉತ್ತರ ಭಾರತದಲ್ಲಿ ಪ್ರಚಲಿತದಲ್ಲಿದ್ದ ಈ ಚರ್ಚೆಗೆ ಕನ್ನಡದಲ್ಲಿ ನಿರೀಕ್ಷಿತ ಸ್ಪಂದನೆ ಸಿಗಲಿಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ, ಕನ್ನಡದ ದಲಿತ ಹೋರಾಟಗಾರರಾಗಲಿ, ದಲಿತ- ಪ್ರಗತಿಪರ ಸಾಹಿತಿಗಳಾಗಲೀ, ತಮ್ಮ ಅಸಮಾನತೆಯ ವಿರುದ್ಧದ ಹೋರಾಟದಲ್ಲಿ ಸಾಮ್ರಾಜ್ಯಶಾಹಿ ಶಕ್ತಿಗಳ ವಿರುದ್ಧದ ಪ್ರತಿಭಟನೆಯನ್ನೂ ಸೇರಿಸಿಕೊಂಡಿದ್ದುದು. ಈ

ISSN PRINT 2319 1775 Online 2320 7876

*Research paper* **© 2012 IJFANS. All Rights Reserved, UGC CARE Listed ( Group -I) Journal Volume 7, Issu 3, 2018**

ಪ್ರತಿಭಟನಾ ಪ್ರಜ್ಞೆಯು 'ಜಾಗತೀಕರಣ'ವು ನವ ವಸಾಹತು ಪ್ರಜ್ಞೆಯ ಭಾಗವಾಗಿದ್ದು, ಈ ಪ್ರಜ್ಞೆಯು ಎಲ್ಲರನ್ನೂ ಒಂದೇ ಏಟಿಗೆ ಮುಗಿಸುತ್ತದೆ ಎಂದು ನಂಬಿತ್ತು.

ಮೊಗಳ್ಳಿ ಗಣೇಶ್ 'ಜಾಗತೀಕರಣವು ದಲಿತರಿಗೆ ಅಭಿವೃದ್ಧಿಯ ಹೊಸ ದಾರಿಯನ್ನು ತೆರೆಯುತ್ತದೆ' ಎಂಬ ತಮ್ಮ ವಾದಕ್ಕೆ ಅಂಬೇಡ್ಕರರು ಆಧುನಿಕತೆಯ ಬಗ್ಗೆ ಇಟ್ಟುಕೊಂಡಿದ್ದ ನಂಬಿಕೆಯನ್ನು ತಾಳೆ ಹಾಕಿದ್ದರು. ಆದರೆ, ಬಾಬಾಸಾಹೇಬರು 'ಆಧುನಿಕತೆ' ಬಗ್ಗೆ ಆಡಿದ್ದ ಮಾತುಗಳನ್ನು ಇವತ್ತಿನ ಜಾಗತೀಕರಣದ ಬಗ್ಗೆ ಆಡಲು ಆಗುವುದಿಲ್ಲ ಎಂಬುದನ್ನು ಈಗಾಗಲೇ ದಲಿತ- ಪ್ರಗತಿಪರರು ಕಂಡುಕೊಂಡಿದ್ದರು. 'ಆಧುನಿಕತೆ' ಎಂಬುದು ಒಂದು ಹೊಸ ಪ್ರಕ್ರಿಯೆಯಾಗಿದ್ದಾಗ ಅದು ಭಾರತದಂತಹ ಜಡ ಸಾಮಾಜಿಕ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತರುತ್ತದೆ ಎಂಬುದನ್ನು ಬಾಬಾಸಾಹೇಬರು ಶಾಲೆ, ಆಸ್ಪತ್ರೆ ರೀತಿಯ ಸಾಧ್ಯತೆಗಳ ಕುರಿತು ಮಾತನಾಡುವಾಗ ಕಂಡುಕೊಂಡಿದ್ದರು. ಅಂದರೆ, ಅದು ಕುವೆಂಪು ಅವರಂತಹ ಹಿರಿಯರು ಕನಸಿದ ರೀತಿಯದ್ದು. ಹೊಸಕಾಲದಲ್ಲಿ ಜ್ಞಾನವಂತರಾದ ಸಹಜೀವಿಗಳು ತಮ್ಮ ಸುತ್ತಲಿನ ಜಾತಿ-ಧರ್ಮ- ಲಿಂಗ ತಾರತಮ್ಯವನ್ನು ಮೀರಲು ಆಧುನಿಕ ಜ್ಞಾನವನ್ನು ಬಳಸಿಕೊಳ್ಳುತ್ತಾರೆ ಮತ್ತು ಅದು ಆಧುನಿಕ ಶಿಕ್ಷಣದಿಂದಲೇ ಬರುತ್ತದೆ ಎಂಬುದು. ಬಾಬಾಸಾಹೇಬರ ಈ ನಂಬಿಕೆಯು ಸಂಪ್ರದಾಯವಾದಿಗಳ, ಜಾತಿವಾದಿಗಳ ವಿರುದ್ಧವಾಗಿ ಹುಟ್ಟಿಕೊಂಡಿದ್ದುದೇ ಹೊರತು ಸಾಮ್ರಾಜ್ಯಶಾಹಿಗಳ, ವಸಾಹತುಶಾಹಿಗಳ ಪರವಾಗಿ ಹುಟ್ಟಿಕೊಂಡಿದ್ದಲ್ಲ ಎಂಬುದನ್ನು ಅವರ ಆಲೋಚನೆಗಳೇ ವಿಷದಪಡಿಸುದ್ದವು. ಅವರು 'ಆಧುನಿಕ ಬ್ರಿಟಿಷ್ ಆಡಳಿತವು ನಮಗೆ ಮೆಟ್ಟಿಲಾಗಬೇಕೇ ಹೊರತು ಉಳಿದುಕೊಳ್ಳುವ ಮನೆಯೇ ಆಗಬಾರದು' ಎಂಬುದನ್ನು ನಂಬಿದ್ದರು.

**ಉಪಸಂಹಾರ**

ಕನ್ನಡ ಸಮುದಾಯವು ಕಳೆದ ನೂರು ವರ್ಷಗಳಲ್ಲಿ ಹಲವು ಸಾಮಾಜಿಕ, ಸಾಂಸ್ಕೃತಿಕ ಬದಲಾವಣೆಗಳನ್ನು ಹಾದು ಬಂದಿದೆ. ಹೀಗೆ ಹಾದು ಬರುವಾಗ ಅಂದಂದಿನ ಕಾಲಕ್ಕೆ ಸೃಷ್ಟಿಸಿದ ಕತಾ ನಿರೂಪಣೆಗಳಲ್ಲಿ ದಾಖಲಾಗಿದ್ದ, ಕನ್ನಡದ ಮನಸ್ಸು ಕಟ್ಟಿಕೊಂಡಿದ್ದ ಆಧುನಿಕತೆಯ ತಿಳಿವಳಿಕೆಗಳನ್ನು ಅರ್ಥ ಮಾಡಿಕೊಳ್ಳುವ ಪ್ರಕ್ರಿಯೆಯನ್ನು ದಾಖಲಿಸಿದೆ. ಕನ್ನಡ ಮನಸ್ಸು ಆಧುನಿಕತೆಯನ್ನು ಅನುಸಂಧಾನ ಮಾಡಿರುವ ನೆಲೆಗಳನ್ನು ಇಲ್ಲಿ ಕಥನಗಳ ಮೂಲಕ ಮಾತ್ರವೇ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಕನ್ನಡ ಸಾಹಿತ್ಯದ ಬಹುಮುಖ್ಯ ಪ್ರಕಾರವಾದ ನಾಟಕ, ವೈಚಾರಿಕ ಬರೆಹಗಳು ಮತ್ತು ಕಾವ್ಯಗಳಲ್ಲಿ ಆಧುನಿಕತೆ ಮೈದಾಳಿರುವ ವಿಧಾನಗಳನ್ನು ಹೆಚ್ಚು ಚರ್ಚಿಸುವ ಸಾಧ್ಯತೆಯಿದೆ.

ISSN PRINT 2319 1775 Online 2320 7876

Research paper © 2012 IJFANS. All Rights Reserved, UGC CARE Listed ( Group -I) Journal Volume 7, Issu 3, 2018

ಇಪ್ಪತ್ತನೆ ಶತಮಾನದ ಆರಂಭದ ಸಾಹಿತ್ಯ ರಚನೆಯಲ್ಲಿ ಸ್ವಾತಂತ್ರ್ಯ ಚಳವಳಿಯನ್ನು ಆಧರಿµ ಬಂದ ಬರೆಷಿÀಗಸು 'ಆಧುನಿಕತೆ'ಯನ್ನು ಗ್ರಹಿಸಿದ ಮಾದರಿಯನ್ನು ವಿಶ್ಲೇಣೆಗೆ ಒಳಪಡಿಸಿದರೆ, ಆ ಕಾಲದಲ್ಲಿ ಕನ್ನಡ ಮನಸ್ಸು ಆಧುನಿಕತೆಯನ್ನು ಗ್ರಹಿಸಿದ ಬಗೆಯನ್ನು ಅಧ್ಯಯನ ಮಾಡಲು ಹಾಗು ಆ ಕಾಲದ ಸಾಹಿತ್ಯ ಗ್ರಹಿಕೆ ಮತ್ತು ಒಳನೋಟಗಳನ್ನು ಕುರಿತು ಆಲೋಚಿಸಲು ಹೆಚ್ಚು ಅವಕಾಶವಿದೆ. ಮುಂದಿನ ಅಧ್ಯಯನಕಾರರು ಈ ನಿಟ್ಟಿನಲ್ಲಿ ಅಧ್ಯಯನಕ್ಕೆ ತೊಡಗಿದರೆ, ಹತ್ತೊಂಬತ್ತನೇ ಶತಮಾನದ ಅಂತ್ಯ ಮತ್ತು ಇಪ್ಪತ್ತನೆ ಶತಮಾನದ ಆರಂಭದಲ್ಲಿ ಕನ್ನಡ ಮನಸ್ಸು ಆಧುನಿಕತೆ ಜೊತೆಗೆ ಒಡನಾಡಿದ ಬಗೆ ಮತ್ತು ಅದನ್ನು ರೂಪಿಸಿಕೊಳ್ಳಲು ಪ್ರಯತ್ನಿಸಿದ ಚಹರೆಗಳನ್ನು ಇನ್ನೂ ಶಕ್ತವಾಗಿ, ನಿರ್ದಿಷ್ಟವಾಗಿ ಅರ್ಥೈಸಿಕೊಳ್ಳುವ ಸಾಧ್ಯತೆಗಳು ಹೆಚ್ಚಿವೆ ಹಾಗೂ ಇಪ್ಪತತನೇ ಶತಮಾನದಲ್ಲಿ ಕನ್ನಡ ಮನಸ್ಸು ಆಧುನಿಕತೆಯ ಕುರಿತ ಕಣ್ಣೋಟವನ್ನು ಒಂದು ಅರಿವಾಗಿ ಕಟ್ಟಿಕೊಳ್ಳುವ ಅವಕಾಶವಿದೆ ಎಂಬುದನ್ನು ಈ ಮಿತಿಯಲ್ಲಿ ಗುರುತಿಸಲಾಗಿದೆ.

ಒಟ್ಟಾರೆ ಈ ಲೇಖನದಲ್ಲಿ ಕನ್ನಡ ಸಮುದಾಯವು ಸಾಹಿತ್ಯಕ ಅಭಿವ್ಯಕ್ತಿಯ ಮೂಲಕ 'ಆಧುನಿಕತೆ'ಯನ್ನು ಕಟ್ಟಿಕೊಂಡ ಕ್ರಮವನ್ನು ಆಯ್ದ ಸಾಹಿತ್ಯ ಕೃತಿಯ ವಿಶ್ಲಷಣೆಯ ಮೂಲಕ ಅರ್ಥೈಸಿಕೊಳ್ಳುವ ಪ್ರಯತ್ನವಾಗಿದೆ.

**ಪರಮಾರ್ಶನಗ್ರಂಥಗಳು**

1. ಕೆ.ವಿ.ನಾರಾಯಣ, ತೊಂಡುಮೇವು- ಕಂತೆ ಎರಡು, ಬರೆಹ ಪಬ್ಲಿಷಿಂಗ್ ಹೌಸ್: ೨೦೧೦
2. ಡಾ.ಎಚ್.ಎಸ್.ರಾಘವೇಂದ್ರ ರಾವ್, ನೀರಿಗೆ ಮೂಡಿದ ಆಕಾರ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ- ೨೦೨೦
3. ರಾಜೇಂದ್ರ ಚೆನ್ನಿ, ಎಂದಿಗೂ ಹೊಸದು, ಅಭಿರುಚಿ ಪ್ರಕಾಶನ – ೨೦೧೪
4. ಡಾ.ಎಚ್.ಎಸ್.ರಾಘವೇಂದ್ರ ರಾವ್, ನೀರಿಗೆ ಮೂಡಿದ ಆಕಾರ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ- ೨೦೨೦
5. ರಾಜೇಂದ್ರ ಚೆನ್ನಿ, ಎಂದಿಗೂ ಹೊಸದು, ಅಭಿರುಚಿ ಪ್ರಕಾಶನ – ೨೦೧೪
6. ಡಾ.ರಹಮತ್ ತರೀಕೆರೆ, ಕತ್ತಿಯಂಚಿನ ದಾರಿ, ಅಭಿನವ ಪ್ರಕಾಶನ, ಬೆಂಗಳೂರು- ೨೦೧೦
7. ಡಾ.ಬಸವರಾಜ ಕಲ್ಗುಡಿ, ನಕ್ಷೆ ನಕ್ಷತ್ರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು- ೨೦೧೦
8. ಡಾ.ಎಚ್.ಎಸ್.ರಾಘವೇಂದ್ರ ರಾವ್, ಪ್ರಗತಿಶೀಲತೆ, ಅಭಿನವ ಪ್ರಕಾಶನ, ಬೆಂಗಳೂರು- ೨೦೧೮

ISSN PRINT 2319 1775 Online 2320 7876
*Research paper* **© 2012 IJFANS. All Rights Reserved**, **UGC CARE Listed ( Group -I) Journal Volume 7, Issu 3, 2018**

9. ಡಾ.ಎಚ್.ಎಸ್.ರಾಘವೇಂದ್ರ ರಾವ್, ಪ್ರಗತಿಶೀಲತೆ, ಅಭಿನವ ಪ್ರಕಾಶನ, ಬೆಂಗಳೂರು- ೨೦೧೮